ಇಂದು ದಿನಾಂಕ 28.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ: ಸ.ಸ.ಅ ರವರಿಂದ:-</u>**

ಒಟ್ಟು ರೂ.3,11,118-00 ಗಳು ಬಿಲ್ಲು ಮಾಡಿ ಹಣವನ್ನು ತೆಗೆದುಕೊಂಡಿದ್ದರು. ಸದರಿ ಹಣವನ್ನು ಬೇರೆ ಬೇರೆ ಶಿಕ್ಷಕರ ಖಾತೆಗೆ ಜಮಾ ಮಾಡಿದ್ದಾರೆ. ದಿನಾಂಕ 28.02.2018 ರಂದು ಆರೋಪಿ ಅರ್ಹ ಶಿಕ್ಷಕರ ಖಾತೆಗೆ ಹಣವನ್ನು ಜಮಾ ಮಾಡಿದ್ದಾರೆ. ಆರೋಪಿ ರೂ.2,58,228-00 ಗಳನ್ನು ಮರಳ ಜಮಾ ಮಾಡಿದ್ದಾರೆ. ಸದರಿ ಹಣವನ್ನು ಚೆಕ್ ಮುಖಾಂತರ ಖಾತೆಗೆ ಜಮಾ ಮಾಡಿದ್ದಾರೆ. ಚೆಕ್ ನಂಬರ ಹೇಳಲು ಬರುವುದಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಸದರಿ ಹಣವನ್ನು ಅಪರಾ ತಪರಾ ಮಾಡಿದ್ದರು.

**<u>ಪಾಟೀ ಸವಾಲು:- ಆರೋಪಿ ಪರ: ಶ್ರೀ.ಆರ್.ಹೆಚ್.ಕೆ. ವಕೀಲರಿಂದ:-</u>**

ಗಳಿಕೆ ಹಣವನ್ನು ಪಡೆಯಲು ಬಿ.ಇ.ಓ ಕಛೇರಿಗೆ ಅರ್ಜಿ ಕೊಡಬೇಕಾಗುತ್ತದೆ ಎಂದರೆ ಸರಿ. ಸದರಿ ಅರ್ಜಿಯನ್ನು ಸದರಿ ಕಛೇರಿಯಲ್ಲಿ ನಮೂದು ಮಾಡಿಕೊಳ್ಳುತ್ತಾರೆ. ಅದಕ್ಕೆ

ಸಂಬಂಧಪಟ್ಟಂತಹ ರಜಿಸ್ಟರನ್ನು ಇಟ್ಟಿರುತ್ತಾರೆ. ಸಂಬಂಧಪಟ್ಟ ಶಾಖೆಯ ನಿರ್ವಹಕರು ಸದರಿ ಅರ್ಜಿಯನ್ನು ಆಯಾ ರಜಿಸ್ಟರಗಳಿಗೆ ಬರೆದಿರುತ್ತಾರೆ. ಬಿ.ಇ.ಓ ಕಛೇರಿಯಲ್ಲಿ ಸಂಬಂಧಪಟ್ಟ ಶಾಖೆ ನಿರ್ವಹಕರು ಬಿಲ್ಲನ್ನು ತಯಾರಿಸಿಸುತ್ತಾರೆ. ಅದನ್ನು ಖಜಾನೆಗೆ ಕಳುಹಿಸುತ್ತಾರೆ. ಸದರಿ ಖಜಾನೆಗೆ ಕಳುಹಿಸುವ ಸಮಯದಲ್ಲಿ ಅಧೀಕ್ಷಕರು, ವ್ಯವಸ್ಥಾಪಕರು ಮತ್ತು ಬಿ.ಇ.ಓ ರವರ ಸಹಿ ಇರುತ್ತದೆ. ಖಜಾನೆಯವರು ಮೂರು ಜನರ ಸಹಿಗಳನ್ನು ಪರಿಶೀಲನೆ ಮಾಡಿ ಮಂಜೂರು ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಿ.ಇ.ಓ ರವರ ಸಹಿ ಮಾತ್ರ ನೋಡುತ್ತಾರೆ. ಖಜಾನೆಯಲ್ಲಿ ಬಿ.ಇ.ಓ ರವರ ಮಾದರಿ ಸಹಿಯನ್ನು ಪರಿಶೀಲನೆ ಮಾಡಿ ಮಂಜೂರು ಮಾಡುತ್ತಾರೆ. ಸಹಿ ಮಾಡುವಾಗ ಸಕ್ಷಮ ಅಧಿಕಾರಿ ಸದರಿ ದಾಖಲಾತಿಯನ್ನು ಪರಿಶೀಲನೆ ಮಾಡಿ ಸಹಿ ಮಾಡುತ್ತಾರೆ ಎಂದರೆ ಸರಿ. ಸಂಬಂಧಿಸಿದ ಕಡತವನ್ನು ಪರಿಶೀಲನೆ ಮಾಡಿ ಸಹಿ ಮಾಡುತ್ತಾರೆ ಎಂದರೆ ಸರಿ. ನಾನು ಹೇಳಿದಂತಹ 15 ಜನ ಗಳಿಕೆ ರಜೆಯ ನಗದೀಕರಣಕ್ಕಾಗಿ ಅರ್ಹರಿದ್ದರು ಎಂದರೆ ಸಾಕ್ಷಿಯು ಅರ್ಹರು ಇರಬಹುದು ಅವರವರ ಅನುಕೂಲಕ್ಕೆ ತಕ್ಕಂತೆ ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಬಿಲ್ಲು ಮಾಡಿದ್ದು ಸರಿ ಇದೆ ಎಂದರೆ ಸಾಕ್ಷಿಯು ಆದರೆ ಹಣವನ್ನು ಬೇರೆ ಖಾತೆಗೆ ಸರಿಯಲ್ಲ ಎಂದು ಹೇಳುತ್ತಾರೆ. 15 ಜನ ಶಿಕ್ಷಕರ ಖಾತೆಗೆ ನೇರವಾಗಿ ಹಣ ಜಮಾ ಆಗಿದೆ ಎಂದರೆ ಸರಿಯಲ್ಲ. 11 ಜನರ ಖಾತೆಗೆ ಹಣ ತಪ್ಪಾಗಿ ಜಮೆ ಆಗಿದ್ದು ಅದನ್ನು ಮರಳಿ ಕೊಡಿ ಎಂದು ಹೇಳಿ ತೆಗೆದುಕೊಂಡು ಬಂದಿದ್ದಾರೆ ಎಂದರೆ ಸರಿ. ಆರೋಪಿ ನಾನು ಹೇಳಿದ ಹಾಗೆ ಯಾವುದೇ ಅಪರಾ ತಪರಾ ಮಾಡಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲಿಗೆ ವಕೀಲರು ಕಾಲವಾಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ ಜಮಖಂಡಿ.

ಸಾಕ್ಷಿಯ ಸಹಿ

| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಜಮಖಂಡಿ** | |
| | **ಸಿ.ಸಿ.ನಂ. – 1/2021** |
| | **ಚಾ.ಸಾ – 5** |
| | **ಪ್ರಾ.ಸಾ – 4** |
| **ಸಾಕ್ಷಿದಾರರ ಹೆಸರು** | **ಚಂದ್ರಶೇಖರ ಹಿರೇಮಠ** |
| **ತಂದೆಯ ಹೆಸರು** | **ಪರಯ್ಯ** |
| **ವಯಸ್ಸು** | **53 ವರ್ಷ** |
| **ಉದ್ಯೋಗ** | **ಶಿಕ್ಷಕರು, ಹೆಚ್.ಬಿ.ಎಸ್. ಕೊಣ್ಣೂರ ತೋಟದ ಶಾಲೆ ನಂ.1** |
| **ವಾಸಸ್ಥಳ** | **ಕೊಣ್ಣೂರ.** |

ಇಂದು ದಿನಾಂಕ 28.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆ: ಸ.ಸ.ಅ ರವರಿಂದ:–</u>**

1. 2018 ನೇ ಸಾಲಿನಲ್ಲಿ ಗಳಿಕೆ ರಜೆ ನಗದೀಕರಣಕ್ಕಾಗಿ ಅರ್ಜಿಯನ್ನು ಕೊಟ್ಟಿದ್ದೆನೆ. ನನ್ನ ಖಾತೆಗೆ ಸದರಿ ಗಳಿಕೆ ರಜೆಯ ನಗದೀಕರಣ ಹಣವನ್ನು ನನ್ನ ಖಾತೆಗೆ ಜಮಾ ಮಾಡಿದ್ದಾರೆ. ನನ್ನ ಖಾತೆ ನಂ.30343653923. ಸದರಿ ಖಾತೆಗೆ ರೂ.16,301–00 ಗಳು ಜಮೆ ಆಗಿತ್ತು. ನನ್ನ ಖಾತೆಗೆ ಹಣ ಜಮೆ ಆಗಿದೆ ಎಂದು ನನ್ನ ಮೊಬೈಲಗೆ ಮೆಸೆಜ ಬಂದಿದೆ. ನನ್ನ ಖಾತೆಗೆ ಬಂದ ಹಣವನ್ನು ನಾನು ತೆಗೆದುಕೊಂಡಿದ್ದೇನೆ. ಈ ಬಗ್ಗೆ ನನ್ನನ್ನು ಯಾರೂ ವಿಚಾರಣೆ ಮಾಡಿಲ್ಲ. ಹಣವನ್ನು ಮರಳಿ ಕೊಡು ಎಂದು ನನ್ನನ್ನು ಯಾರೂ ಕೇಳಿಲ್ಲ, ನಾನು ಹಣವನ್ನು ಕೊಟ್ಟಿಲ್ಲ. ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)**

**<u>ಪಾಟೀ ಸವಾಲು : ಸ.ಸ.ಅ ರವರಿಂದ:–</u>**

1. ನನ್ನ ಖಾತೆಗೆ ಹಣ ಜಮೆ ಆದ ಮರುದಿನ ಬಿ.ಇ .ಓ ಕಛೇರಿಯ ಆರೋಪಿ ತನಗೆ ಫೋನ್ ಮಾಡಿ, ತನ್ನ ತಾಯಿಯನ್ನು ಆಸ್ಪತ್ರೆಗೆ ಸೇರಿಸಬೇಕು, ತಮ್ಮ ಸಂಬಂಧಿಕರು ತಪ್ಪಾಗಿ ನಿಮ್ಮ ಖಾತೆಗೆ ಹಣ ಜಮಾ ಮಾಡಿದ್ದಾರೆ, ಸದರಿ ಹಣವನ್ನು ಮರಳಿ ಕೊಡಬೇಕು ಎಂದು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಆತನ ಮಾತನ್ನು ನಂಬಿ ನನ್ನ ಖಾತೆಯಿಂದ 14000–00ಗಳನ್ನು ಮತ್ತು ನನ್ನ ಖಾತೆಯಲ್ಲಿ ಉಳಿದ ಹಣ ಸೇರಿಸಿ ಒಟ್ಟು ರೂ.16301–00 ಗಳನ್ನು ಆರೋಪಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿ ಇದೇ ರೀತಿ

ಶಿಕ್ಷಕರ ಖಾತೆಗೆ ಹಣ ಜಮಾ ಮಾಡಿ ಮರಳ ಪಡೆಯುತ್ತಿದ್ದ ವಿಷಯ ನಮ್ಮ ತಾಲೂಕಿನ ಎಲ್ಲ ಶಿಕ್ಷಕರು ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ 6 ರಿಂದ 16 ರವರು ಬಿ.ಇ.ಓ ಕಛೇರಿಗೆ ಹೋಗಿ ಚಾಸಾ 1 ರವರ ಬಳ ವಿಷಯ ತಿಳಸಿದೆವು ಎಂದರೆ ಸರಿಯಲ್ಲ. ಆಗ ಚಾಸಾ 4 ಮತ್ತು ಬಿ.ಸಿ.ಮಠ ಇವರು ಬಿ.ಇ.ಓ ರವರ ದಾಖಲಾತಿಗಳನ್ನು ಪರಿಶೀಲನೆ ಮಾಡಿ ತಿಳಸಿದರು ಎಂದರೆ ಸರಿಯಲ್ಲ. ಚಾಸಾ 4 ಸದರಿ ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ ಆರೋಪಿ ಯಾವುದೇ ಶಿಕ್ಷಕರ ಅರ್ಜಿಗಳನ್ನು ಪಡೆಯದೇ ಶಿಕ್ಷಕರ ಗಳಕೆ ರಜೆಯ 2ನೇ ಬಿಲ್ಲನ್ನು ತಯಾರಿಸಿ ಹೆಚ್.ಆರ್.ಎಂ.ಸ್. ತಂತ್ರಾಂಶದಲ್ಲಿ ಟೋಕನ ಪಡೆದು ಅಪ್ರೂವಲ್ ಪಡೆದು ಅವುಗಳನ್ನು ಕಳುಹಿಸಿ ಚಾಸಾ 4 ರವರ ಗಮನಕ್ಕೆ ತರದೇ ಸಹಿ ಪಡೆಯದೇ ಅನುದಾನ ಪುಸ್ತಕದಲ್ಲಿ ಪೂರ್ಣ ಬಿಲ್ಲನ್ನು ಸೃಷ್ಟಿ ಮಾಡಿ ಉಪಖಜಾನೆ ಜಮಖಂಡಿಗೆ ದಿನಾಂಕ 28.12.2017 ರಂದು ಮತ್ತು 15.09.2017 ರಂದು ಕೊಟ್ಟ ಚೆಕ್‌ನ್ನು ಪಡೆದುಕೆಕೂಂಡು ಚಾಸಾ 15 ರ ಖಾತೆಗೆ ಹಣ ಜಮಾ ಮಾಡಿದ್ದರು ಎಂದರೆ ಸರಿಯಲ್ಲ. ಅಲ್ಲದೇ ತನ್ನ ಖಾತೆಗೆ ರೂ.58887-00ಗಳ ಪೇ ಲಿಸ್ಟ ತಯಾರಿಸಿ 11 ಜನ ಶಿಕ್ಷಕರ ಬ್ಯಾಂಕ್ ಖಾತೆಗೆ ಜಮಾ ಮಾಡಿಸಿದ್ದು ಅಲ್ಲದೇ ತನ್ನ ಖಾತೆಗೂ ಕೂಡ ಹಣ ಜಮಾ ಮಾಡಿಕೊಂಡಿರುತ್ತಾರೆ ಎಂದು ಚಾಸಾ 1 ತಿಳಸಿದರು ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ 1 ಆರೋಪಿಯ ವಿರುದ್ಧ ಕೇಸನ್ನು ದಾಖಲಿಸಿದ್ದಾರೆಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿ ಸೃಷ್ಟಿ ಮಾಡಿದ ದಾಖಲಾತಿಗಳನ್ನು ಚಾಸಾ 1 ರವರು ಪರಿಶೀಲಿಸಿದಾಗ ಅವುಗಳ ಮೇಲಿನ ಸಹಿಯನ್ನು ಬಿ.ಇ .ಓ ರವರವರಂತೆ ಸಹಿಗಳು ಕಂಡು ಬಂದಿದ್ದು ಅವರೂ ಸಹ ತನ್ನ ಸಹಿಗಳು ಇರಬಹುದು ಎಂದು ಹೇಳದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ರವರ ಕೆಲಸದ ಒತ್ತಡದಲ್ಲಿದ್ದಾಗ ಮೋಸ ಮಾಡಿ ಅವರ ಸಹಿ ತೆಗೆದುಕೊಂಡು ಖಜಾನೆಗೆ ಕಳುಹಿಸಿ ಹಣ ದುರುಪಯೋಗ ಪಡಿಸಿಕೊಂಡು ಮೋಸ ವಂಚನೆ ಮಾಡಿದ್ದಾರೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿ ಮೇಲಾಧಿಕಾರಿಗಳ ಗಮನಕ್ಕೆ ತರದೇ ಶಿಕ್ಷಕರಿಂದ ಅರ್ಜಿ ಪಡೆಯದೇ ಶಿಕ್ಷಕರ ಗಳಕೆ ರಜೆಯ ನಗದೀಕರಣ ಮಾಡಿಕೊಂಡು ಜಮೆ ಮಾಡುವ ಸಲುವಾಗಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ರೂ.58877-00 ಗಳನ್ನು ಮತ್ತು ಇನ್ನುಳದ ಶಿಕ್ಷಕರ ಖಾತೆಗೆ ರೂ.252241-00 ಜಮಾ ಮಾಡಿ, ನಿಮ್ಮ ಬ್ಯಾಂಕ ಖಾತೆಗೆ ಹಣ ಜಮಾ ಮಾಡಿದ್ದೇನೆ, ನಮ್ಮ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು

ಎಂದು ನಂಬಿಸಿ ನಮ್ಮ ಖಾತೆಯಿಂದ ಹಣ ಪಡೆದುಕೊಂಡು ಸರಕಾರಕ್ಕೆ ನಂಬಿಕೆ ದ್ರೋಹ ಮಾಡಿ, ಮೋಸ ಮಾಡಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ ------- ಜಮೆ ಮಾಡಿದ್ದಾನೆ ಎಂದು ಈಗ ಓದಿ ಹೇಳದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಎಲ್ಲ ವಿಷಯಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೆ. ಸರಿ ಅದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ ಜಮಖಂಡಿ.

ಸಾಕ್ಷಿಯ ಸಹಿ